KATK900171522024

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು.**

**ಎಸ್.ಸಿ ಸಂಖ್ಯೆ: 10015/2024**

**ಪ್ರಮಾಣೀಕರಿಸಿದ ದಿನಾಂಕ: 28.01.2026**

**ಚಾಸಾ.4**

**ಫ್ರಾಸಾ.4**

| | |
|---|---|
| ಹೆಸರು | ಹೇಮಲತಾ |
| ಗಂಡನ ಹೆಸರು | ಲೋಕೇಶ್ |
| ವಯಸ್ಸು | 39 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕೋಡಿಹಳ್ಳಿ, ತುರುವೇಕೆರೆ |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ದಿ: 28.10.2023 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 17-18 ವರ್ಷಗಳಿಂದ ಕೋಡಿಹಳ್ಳಿಯಲ್ಲಿ ವಾಸವಿರುತ್ತೇನೆ. ದಿ: 25.10.2023 ರಂದು ಸಂಜೆ 4.45 ಗಂಟೆಯ ಸಮಯದಲ್ಲಿ ನಾನು ನನ್ನ ತೋಟದಲ್ಲಿ ಹಸು

ಮೇಯಿಸುತ್ತಿದ್ದಾಗ ಯಾರೋ ಕಿರುಚಾಡಿದ ಶಬ್ದ ಕೇಳಿಸಿತು. ನಾನು ಸುಮಾರು 400 ಮೀಟರ್ ಅಂತರದಲ್ಲಿ ಇದ್ದೆನು. ಸದರಿ ಈಶ್ವರಯ್ಯರವರ ರೇಷ್ಮೆ ತೋಟದಲ್ಲಿ ಗಲಾಟೆ ನಡೆಯುತ್ತಿದ್ದು, ನಾನು ಅಲ್ಲಿಗೆ ಹೋಗಿರುತ್ತೇನೆ. ನಾನು ದಿಲೀಪ್ ಈತನನ್ನು 100 ಮೀಟರ್ ಅಂತರದಲ್ಲಿ ಮೊದಲು ನೋಡಿರುತ್ತೇನೆ. ಆಗ ಸದರಿ ದಿಲೀಪ್ ಈತನು ದಪ್ಪ ಕಲ್ಲನ್ನು ಎತ್ತಿಕೊಂಡು ನಿಂತಿದ್ದನು. ಅಲ್ಲಿ ಒಂದು ಹೆಂಗಸು ಕೆಳಗೆ ಬಿದ್ದಿದ್ದಳು. ಅಲ್ಲಿ ಸ್ವಲ್ಪ ದೂರದಲ್ಲಿ ತ್ರಿವೇಣಿ ಹಾಗೂ ರಮೇಶ್ ರವರು ನಿಂತಿದ್ದರು. ಸದರಿ ವ್ಯಕ್ತಿಯು ಹೆಂಗಸಿನ ತಲೆಯ ಮೇಲೆ ಕಲ್ಲನ್ನು ಎತ್ತಿ ಹಾಕಿ, ಊರಿನ ಕಡೆಗೆ ಬೈಕಿನಲ್ಲಿ ಹೊರಟು ಹೋದ. ಸದರಿ ಹೆಂಗಸಿನ ಹತ್ತಿರ ಹೋಗಿ ನಾನು ನೋಡಿದಾಗ ಅವರ ಜೀವ ಎರಡು ನಿಮಿಷದ ನಂತರ ಹೊರಟು ಹೋಗಿರುತ್ತದೆ. ಸದರಿ ಹೆಂಗಸಿನ ಹೆಸರು ಕಾವ್ಯ ಇರುತ್ತದೆ.

ಸದರಿ ಕಾವ್ಯ ಮುಖವನ್ನು ನೋಡಿದಾಗ, ಮುಖ ಜಜ್ಜಿ ಹೋಗಿ ಮಾಂಸಖಂಡ ಕಾಣುತ್ತಿತ್ತು. ಸದರಿ ವ್ಯಕ್ತಿಯು ಗಲಾಟೆ ಮಾಡಿಕೊಂಡಿದ್ದು, ಆತ ಆಕೆಯ ಮೇಲೆ ಕಲ್ಲನ್ನು ಎತ್ತಿ ಹಾಕಿ ಕೊಲೆ ಮಾಡಿರುತ್ತಾನೆ, ಅದನ್ನು ನಾನು ಕಣ್ಣಾರೆ ಕಂಡಿರುತ್ತೇನೆ. ಆ ಕಡೆಯಿಂದ ವಿರೂಪಾಕ್ಷಯ್ಯನವರು ಬರುತ್ತಿದ್ದು, ಅವರಿಗೆ ನಾನು ಆಂಬ್ಯೂಲೆನ್ಸ್ ಗೆ ಕರೆ ಮಾಡಲು ತಿಳಿಸಿರುತ್ತೇನೆ. ಆಗ ಅವರು ನನಗೆ ಆಂಬ್ಯೂಲೆನ್ಸ್ ಕರೆ ಮಾಡಲು ಬರುವುದಿಲ್ಲ ಎಂದು ತಿಳಿಸಿದ್ದು, ಆಗ ನಾನು ಊರಿನಲ್ಲಿ ಯಾರಿಗಾದರೂ ಕರೆ ಮಾಡಿ ವಿಚಾರ ತಿಳಿಸಿ ಎಂದು ಹೇಳಿರುತ್ತೇನೆ. ನಂತರ ನನಗೆ ಭಯವಾಗಿ ಹಸುವನ್ನು ಹೊಡೆದುಕೊಂಡು ಮನೆಗೆ ಹೊರಟು ಹೋಗಿರುತ್ತೇನೆ. ನಾನು ಸದರಿ ಘಟನೆಯ ಬಗ್ಗೆ ದಿಃ 27.10.2023 ರಂದು ತುರುವೇಕೆರೆ ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು

ನೀಡಿರುತ್ತೇನೆ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಕಲಂ 164 ಸಿ.ಆರ್.ಪಿ.ಸಿ ಹೇಳಿಕೆಯನ್ನು **ನಿ.ಪಿ–7** ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ–7(ಎ) ರಿಂದ (ಸಿ) ಎಂದು ಗುರುತಿಸಲಾಯಿತು.

ಸದರಿ ಆರೋಪಿ ದಿಲೀಪ್ ಈತನನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ವಿ.ಸಿ ಮುಖಾಂತರ ಹಾಜರಿರುವ ಆರೋಪಿ ದಿಲೀಪ್ ಈತನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಆರೋಪಿತನು ಚಲಾಯಿಸಿಕೊಂಡು ಹೋದ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲು–18 ಬೈಕನ್ನು ನೋಡಿ ಗುರುತಿಸಿರುತ್ತಾರೆ.

**(ಪಾಟೀ ಸವಾಲುಃ ಆರೋಪಿ ಪರ ಶ್ರೀ.ಹೆಚ್.ಎಲ್.ಬಿ ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತಿಪಟೂರು.**